ಪೊಲೀಸ್ ಇಲಾಖಾ.

ತಾರೀಖು 8ನೇ ಮಾರ್ಚೀ 1887.

ಬಳ್ಳೇ ಹೊನ್ನೂರು ಮತ್ತು ಯಡೆಹಳ್ಳಿ ಸ್ಟೇಷನುಗಳ ಸರಹದ್ದಿನ ವಳಗೆ ಯಿರತಕ್ಕ ಕಾಡಕೊಡಗಿ ಗ್ರಾಮದಲ್ಲಿನ ಚಂದಯ್ಯನ ಮನೆಯಿಂದ 1885ನೇ ಇಸವಿ ಮೇ 13ನೇ ತಾರೀಖಿನಲ್ಲಿ ಜೋರಿಯಿಂದ ವಯ್ಯೋಣಾವ ಸುಮಾರು 12 ವರುಷ ವಯಸ್ಸುಳ್ಳ ಗುತ್ತಿ ಯಂಬ ಹುಡುಗಿಯ ಪತ್ತೇ ವಿಷಯದಲ್ಲಿ ಸಾಧಕವಾದ ವರ್ತಮಾನ ಕೊಡುವಂಥಾವರಿಗೆ 50 ರೂಪಾಯಿ ಇನಾಂ ಕೊಡಲ್ಪಡುತ್ತೆ.

ಯಲ್. ರಿಕ್ಕೆಟ್ಸ್,
ಪೊಲೀಸ್ ಇನ್ಸ್ಪೆಕ್ಟರ್ ಜನರಲ್.

ಫಾರೆಸ್ಟ್ ಇಲಾಖಾ.

ತಾರೀಖು 23ನೇ ಮಾರ್ಚೀ 1887.

ಇದರಿಂದ ಸರ್ವರತಿಳುವಳಿಕೆ ಬಗ್ಗೆ ಪ್ರಕಟಪಡಿಸುವದೇನಂದರೆ, ಶಿವಮೊಗ್ಗಾ ವ ಕಡೂರು ಡಿಸ್ಟ್ರಿಕ್ಟುಗಳ ಉತ್ಪತ್ತಿ ಚಾಬತು ಯಿದ ರಡೀ ಕಂಡ ಮರಗಳು ಫಾರೆಸ್ಟ್ ಅಸಿಸ್ಟೆಂಟ್ ಕಂಸರ್‌ವೇಟರವರಿಂದ ಆಯಾತಾರೀಖುಗಳಲ್ಲಿ ಬಹಿರಂಗವಾದ ಹರಾಜುಮೂಲಕ ವಿಕ್ರ ಯಿಸಲ್ಪಡುತ್ತೆ.

ಡಿಪೋ ಹೆಸರು.	ಹರಾಜ್ ತಾರೀಖು.	ತೇಗದನಾಟಾ ಗಳು.	ಕಾಡುಮರದ ನಾಟಾಗಳು.	ತೇಗದ ಮತ್ತು ಕಾಡುಜಾತಿ ಕೂಚಗಳು.	ಷರಾ.
ಸೊರಬ ತಾಲ್ಲೂಕು ತೆಲಗದ್ದೆ ..	2ನೇ ಮೇ 1887	100	..	..	ಹೆಚ್ಚು ಕಡಿಮೆಯಾಗಿ.
ಸಿಕಾರೀಪುರ ..	7ನೇ ಡಿಟೋ	..	100	350	
ಶಿರಾಳಕೊಪ್ಪ ..	8ನೇ ಡಿಟೋ	..	150	..	
ಚನ್ನಗಿರಿ ..	13ನೇ ಡಿಟೋ	25	10	300	
ಆಯಿನೂರು ..	22ನೇ ಡಿಟೋ	150	400	100	
ಶಿವಮೊಗ್ಗಾ ..	24ನೇ ಡಿಟೋ	180	100	300	
ಕೊಪ್ಪದ ತಾಲ್ಲೂಕು ಕಣಬೂರು ..	28ನೇ ಡಿಟೋ	..	300	..	
ತರೀಕೆರೆ ತಾಲ್ಲೂಕು ಲಕ್ಕವಳ್ಳಿ ..	1ನೇ ಜೂ ಡಿಟೋ	2,200	400	600	

ಹರಾಜಿನ ಷರತ್ತುಗಳು—1873ನೇ ಇಸವಿ ಜೂ 12ನೇ ಮತ್ತು 20ನೇ ನಂಬರ್ ಮೈಸೂರು ಗೆಜೆಟಿನಲ್ಲಿ ಪ್ರಾಯಿಷ್ಮಾಡ ಲ್ಪಟ್ಟ ಪ್ರಕಾರ ಯಿರತಕ್ಕವು, ಮತ್ತು ಹರಾಜ್‌ಕಾಲದಲ್ಲಿ ವ್ಯೋದಲ್ಪಡುವದು.

ತಾರೀಖು 30ನೇ ಮಾರ್ಚೀ 1887.

ಇದರಿಂದ ಪ್ರಕಟಪಡಿಸುವದೇನಂದರೆ, ಮತ್ತೊಂದು ಹುಕುಂ ಕೊಡುವ ಪರಿಯಂತ ಶಿವಮೊಗ್ಗಾ ಮತ್ತು ಕಡೂರು ಡಿಸ್ಟ್ರಿಕ್ಟುಗೆ ಳಲ್ಲಿಯ ಇದರಡೀ ಕಂಡ ಡಿಪೋಗಳಲ್ಲಿ ಮರಗಳ ಹರಾಜು ಸಾಲೀಯಾನಾ ಇದರೆಡೀ ನಮೂದಿಸುವ ತಾರೀಖುಗಳಲ್ಲಿ ನಡಿಸಲ್ಪಡುವದು.